ಅ) ನಷ್ಟಕ್ಕೆ ಕಾರಣ ಅದಕ್ಷ ಆಡಳಿತವೇ ?

ಇ) ಹಾಗಿದ್ದಲ್ಲಿ ಆಡಳಿತ ವರ್ಗದ ಮೇಲೆ ಯಾವ ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಜೆ.ಹೆಚ್. ಪಟೇಲ್(ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು).–

ಅ) ಹೌದು. ಸಕ್ಕರೆ ಕಾರ್ಖಾನೆಯ ನಷ್ಟಕ್ಕೆ ಕಾರಣಗಳು :

೧ ಈ ಸಕ್ಕರೆ ಕಾರ್ಖಾನೆಯಲ್ಲಿ ಪರಿವರ್ತನಾ ವೆಚ್ಚವು ರಾಜ್ಯದಲ್ಲಿಯೇ ಅತಿ ಹೆಚ್ಚಿನ ದಾಗಿರುವುದು;

೨ ಕಬ್ಬಿನ ಗಾಣಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಗಾಣಿಕೆಯಾಗುವ ಕಬ್ಬಿನಿಂದಾಗಿ ಕಾರ್ಖಾನೆಯ ಕಬ್ಬು ಅರೆಯುವಿಕೆಯ ಪ್ರಮಾಣ ಕಡಿಮೆಯಾಗಿರುವುದು;

೩ ಯಂತ್ರೋಪಕರಣ ಆಯು ಕ್ಷಿತಪ್ಪುವಿಕೆಯಿಂದಾಗಿ ಇಳುವರಿ ಪ್ರಮಾಣ ಕಡಿಮೆ ಇರುವುದು.

ಇ) ಕಾರ್ಖಾನೆಯು ಹಣಕಾಸಿನ ದುರ್ವ್ಯಹಾರದಿಂದಲೂ ಸಹ ನಷ್ಟ ಅನುಭವಿಸಿದೆ ಎಂದು ಆಪಾದಿಸಲಾಗಿದೆ. ಈ ತರಹದ ನಷ್ಟ ಉಂಟಾಗಿರುವ ಪ್ರಕರಣಗಳ ಬಗ್ಗೆ ವಿಚಾರಣೆ ಮಾಡಲು ಲೋಕಾಯುಕ್ತಕ್ಕೆ ಕುಪನಿಯು ಮನವಿ ಮಾಡಿಕೊಳ್ಳಲಾಗಿದೆ.

ಹೊಸದುರ್ಗ ತಾಲ್ಲೂಕಿಗೆ ಹಾಲಿನ ಡೈರಿ

೭೪೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).— ಮಾನ್ಯ ಪಶುಸಂಗೋಪನೆ ಮತ್ತು ಪಶು ವೈದ್ಯ ಸೇವೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಎಲ್ಲ ತಾಲ್ಲೂಕುಗಳಲ್ಲಿ ಹೈನು ಕೇಂದ್ರಕ್ಕೆ ಹಾಲು ಖರೀದಿ ಮತ್ತು ಹಾಲು ವಿತರಣೆಗೆ ವ್ಯವಸ್ಥೆ ಮಾಡಲು ಸರ್ಕಾರವು ಆಲೋಚಿಸಿದೆಯೆ ?

ಆ) ಹಾಗಿದ್ದಲ್ಲಿ ಸದರಿ ಸೌಲಭ್ಯಕ್ಕೆ ರಾಜ್ಯದ ಎಷ್ಟು ತಾಲ್ಲೂಕುಗಳು ಒಳಪಟ್ಟಿವೆ ?

ಇ) ಹೊಸದುರ್ಗ ತಾಲ್ಲೂಕನ್ನು ತುಮಕೂರು ಅಥವಾ ಶಿವಮೊಗ್ಗ ಹೈನು ಕೇಂದ್ರದ ವ್ಯಾಪ್ತಿಗೆ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ ?

ಶ್ರೀ ಸಿದ್ದರಾಮಯ್ಯ (ಪಶು ಸಂಗೋಪನೆ ಮತ್ತು ಪಶುವೈದ್ಯ ಸೇವೆಗಳ ಸಚಿವರು).—

ಅ) ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಹಾಲು ಉತ್ಪಾದಕರ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಹಾಲನ್ನು ಶೇಖರಿಸಿ, ವಿತರಣೆ ಮಾಡಲು ಯೋಜಿಸಲಾಗಿದೆ,

ಆ) ಈಗ, ೧೪ ತಾಲ್ಲೂಕುಗಳು.

ಇ) ಹೊಸದುರ್ಗ ತಾಲ್ಲೂಕು ಈಗಾಗಲೇ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ತುಮಕೂರು ಇದರ ಕಾರ್ಯವ್ಯಾಪ್ತಿಯಲ್ಲಿದೆ.

ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ

೫೭೬. ಶ್ರೀಮತಿ ಮುಕ್ತರುನ್ನೀಸಾ (ನರಸಿಂಹರಾಜ).— ಮಾನ್ಯ ವಿದ್ಯುತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಇದುವರೆಗೆ ವಿದ್ಯುತ್ ಉತ್ಪಾದನೆಗೆ ಉಪಯೋಗಿಸಲ್ಪಡದೇ ಇರುವಂತಹ ಜಲಪಾತಗಳ ಸಂಖ್ಯೆ ಎಷ್ಟು ?

ಆ) ಸರ್ಕಾರವು ಈ ಜಲಪಾತಗಳಲ್ಲಿ ವಿದ್ಯುತ್ ಉತ್ಪಾದನೆಗಾಗಿ ಯಾವುದೇ ಹೊಸ ಜಲವಿದ್ಯುತ್ ಯೋಜನೆಗಳನ್ನು ಕೈಗೊಂಡಿದೆಯೇ ?